**ಸಾಕ್ಷಿಯನ್ನು ದಿಃ 15.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎನ್ ಎನ್ ವಕೀಲರಿಂದ**

ನಾನು ಮನೆ ಕಟ್ಟಡ ಕಟ್ಟುವ ಕಂಟ್ರಾಕ್ಟರ್ ಎಂದು ನಾನು ಸೂಕ್ತ ಪ್ರಾಧಿಕಾರದಿಂದ ಪರವಾನಿಗೆ ಪಡೆದುಕೊಂಡಿಲ್ಲ. ನಾನು ಕಂಟ್ರಾಕ್ಟರ್ ಆಗದ ಕಾರಣ ದಾಖಲೆ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಗಾರೆ ಕೆಲಸ ಎಂದು ಹೇಳಿದ್ದೇನೆ. ಪ್ರತಿವಾದಿ ಕೂಲಿ ಕೆಲಸ ಮಾಡುತ್ತಾನೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನನ್ನ ಸಂಪಾದನೆ ತೋರಿಸಲು ದಾಖಲೆ ಇರುವುದಿಲ್ಲ ಆದರೆ ಕೂಲಿ ಕೆಲಸದಿಂದ ಅಂದಾಜು ರೂ.1000/-ದುಡಿಯುತ್ತೇನೆ. ನಾನು ಕೆಲಸ ಮಾಡುವ ಕಡೆ ನನ್ನ ಆದಾಯ ರೂ.1000/- ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ. 2010 ರಲ್ಲಿ 600-700 ಪ್ರತಿ ದಿನ ದುಡಿಯುತ್ತಿದ್ದೆ. ಕೂಲಿ ಕೆಲಸ ಮಾಡುವವರಿಗೆ 100 ರಿಂದ 200 ಇತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ರೂ.300/- ಇತ್ತು ಎಂದು ನುಡಿಯುತ್ತಾರೆ. 2010 ರಲ್ಲಿ ನನ್ನ ಬಳಿ ಬ್ಯಾಂಕಿನ ಖಾತೆ ಇರುವುದಿಲ್ಲ. ನನ್ನ ಬಳಿ ನಾನು ಪ್ರತಿವಾದಿಗೆ ದುಡ್ಡು ಕೊಟ್ಟೆ ಎನ್ನಲಾದ ಸಮಯದಲ್ಲಿ ರೂ.50000/- ಇತ್ತು ಎಂದು ತೋರಿಸಲು ದಾಖ್ಲೆಗಳು ಇರುವುದಿಲ್ಲ ಆದರೆ ಸಾಕ್ಷಿ ಮುಂದುವೆರದು ಬೇರೆ ಅವರ ಬಳಿ ದುಡ್ಡು ಪಡೆದುಕೊಂಡು ಪ್ರತಿವಾದಿಗೆ ಎರಡು ಬಾರಿ ರೂ.25 ಸಾವಿರದಂತೆ ಪಾವತಿ ಮಾಡಿದ್ದೇನೆ. ಇಬ್ಬರು ವ್ಯಕ್ತಿಗಳಿಂದ ಸಾಲವನ್ನು ಪಡೆದುಕೊಂಡು ಪ್ರತಿವಾದಿಗೆ ಕೊಟ್ಟಿದ್ದೇನೆ. ಈ ದಾವೆಯ ಸಾಕ್ಷಿದಾರರಾದ ಗೋವಿಂದಪ್ಪ ಬದುಕಿದ್ದು ಆತನಿಂದ 25 ಸಾವಿರ ಪಡೆದುಕೊಂಡು, ಇನ್ನೊಬ್ಬ ವೆಂಕಟೇಶ ರೆಡ್ಡಿ ಈಗ ಮೃತರಾಗಿದ್ದು ಅವರಿಂದ ರೂ.25000/- ಪಡೆದುಕೊಂಡು ಕೊಟ್ಟಿರುತ್ತೇನೆ.

ಪ್ರತಿವಾದಿಯು ಸದರಿ ವೆಂಕಟೇಶರೆಡ್ಡಿ ಮತ್ತು ಗೋವಿಂದಪ್ಪರವರಿಗೆ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ. ನಾನು ಮೂರನೇ ವ್ಯಕ್ತಿಯಾದ್ದರಿಂದ ಪ್ರತಿವಾದಿಯು ನನಗೆ ಪತ್ರ ಬರೆದುಕೊಟ್ಟನೇ ಹೊರತು ಗೋವಿಂದಪ್ಪ ಮತ್ತು ವೆಂಕಟೇಶಪ್ಪರವರಿಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ ಮತ್ತು ನಾನು ಕೂಡ ಸದರಿಯವರಿಗೆ ಯಾವುದೇ ದಾಖಲೆ ಬರೆದುಕೊಟ್ಟಿಲ್ಲ. ಪ್ರತಿವಾದಿಯಿಂದ ಸದರಿ ಗೋವಿಂದಪ್ಪ ಮತ್ತು ವೆಂಕಟೇಶಪ್ಪರವರಿಗೆ ದಾಖಲೆ ಬರೆಸಿಕೊಡಲು ತೊಂದರೆ ಇರಲಿಲ್ಲ. ಗೋವಿಂದಪ್ಪರವರಿಂದ ಅಂದಾಜು 2011ರಲ್ಲಿ ರೂ.25000/- ಪ್ರತಿವಾದಿಗೆ ಕೊಡಿಸಿದ್ದು ಯಾವ ತಿಂಗಳು ಮತ್ತು ದಿನಾಂಕ ನೆನಪಿಲ್ಲ. ವೆಂಕಟೇಶಪ್ಪರವರಿಂದ ಪ್ರತಿವಾದಿಗೆ ಅಂದಾಜು 2011ರಲ್ಲಿ ರೂ.25000/- ಪ್ರತಿವಾದಿಗೆ ಕೊಡಿಸಿದ್ದು ಯಾವ ತಿಂಗಳು ಮತ್ತು ದಿನಾಂಕ ನೆನಪಿಲ್ಲ. ಗೋವಿಂದಪ್ಪ ಮತ್ತು ವೆಂಕಟೇಶಪ್ಪರವರಿಂದ ಪ್ರತಿವಾದಿಗೆ ಹಣ ಕೊಡಿಸಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ ಆದರೆ ಸಾಕ್ಷಿಯು ನಾನು ಹಾಜರು ಪಡಿಸಿರುವ ದಾಖಲೆಯೇ ಆ ದಾಖಲೆ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಾಗಲೀ ವಾದಪತ್ರದಲ್ಲಾಗಲೀ ಈ ಮೇಲೆ ಹೇಳಿದ ಗೋವಿಂದಪ್ಪ ಮತ್ತು ವೆಂಕಟೇಶಪ್ಪ ರವರ ಬಗ್ಗೆ ಉಲ್ಲೇಖ ಮಾಡಿಲ್ಲ.

ನಿಪಿ-1ರಲ್ಲಿ ಕೂಡ ಸದರಿ ಗೋವಿಂದಪ್ಪ ಮತ್ತು ವೆಂಕಟೇಶಪ್ಪರವರಿಂದ ಹಣವನ್ನು ಪ್ರತಿವಾದಿಗೆ ಕೊಡಿಸಿರುವ ಬಗ್ಗೆ ಉಲ್ಲೇಖ ಇಲ್ಲ ಸಾಕ್ಷಿ ಮುಂದುವರೆದು ಸದರಿಯವರು ನಾನು ನಿನಗೆ ಹಣ ಕೊಟ್ಟಿರುತ್ತೇವೆ, ನಮ್ಮ ಹಣವನ್ನು ನಮಗೆ ಹಿಂದಿರುಗಿಸಿ ನೀವು ಪ್ರತಿವಾದಿಯ ಮೇಲೆ ಕೇಸು ದಾಖಲಿಸಿ ಎಂದು ಹೇಳಿದರು.

ನಿಪಿ-1ರಲ್ಲಿ ಮಟೇಶಪ್ಪ ಎಂದು ಉಲ್ಲೇಖ ಇದೆ ಎಂದರೆ ಸರಿ. ನಿಪಿ-1ರಲ್ಲಿ ಕಂಡು ಬರುವ ಮಟೇಶಪ್ಪನ ಹೆಸರು ಮಟೇಶಪ್ಪ ಅಲ್ಲದೇ ಮುನಿವೆಂಕಟಪ್ಪ ಆಗಿರುತ್ತದೆ ಎಂದರೆ ಸರಿಯಲ್ಲ. ಪತ್ರದಲ್ಲಿ ಮಟೇಶಪ್ಪ ಉರುಫ್ ಮುನಿವೆಂಕಟಪ್ಪ ಎಂದು ಉಲ್ಲೇಖ ಇಲ್ಲ. ನಿಪಿ-1 ದಾಸ್ತಾವೇಜಿನ ಹಾಳೆಯಾಗಿದ್ದು ಸ್ಟಾಂಪ್ ಪೇಪರ್ ಅಲ್ಲ ಎಂದರೆ ಸರಿ. ನಿಪಿ-1ನ್ನು ತಾಲ್ಲೂಕು ಕಛೇರಿಯ ಹತ್ತಿರ ಬೆರಳಚ್ಚು ಮಾಡಿಸಿರುತ್ತೇನೆ. ಬಂಗಾರಪೇಟೆ ತಾಲ್ಲೂಕು ಕಛೇರಿಯ ಬಳಿ ಸ್ಟಾಂಪ್ ಪೇಪರ್ ವಿತರಣಾ ಕೇಂದ್ರ ಇದೆ ಎಂದರೆ ಸರಿ. ಅಲ್ಲಿಂದ ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಆನ್ ಡಿಮ್ಯಾಂರ್ ಪ್ರೋನೋಟ್ ಪಡೆದುಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ. ಸದರಿ ಪ್ರೋನೋಟನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ ಆದರೆ ನಂಬಿಕೆ ಮೇರೆಗೆ ನಿಪಿ-1ನ್ನು ಮಾಡಿಸಿಕೊಂಡಿರುತ್ತೇವೆ. ನಿಪಿ-1ನ್ನು ಯಾರು ತಯಾರು ಮಾಡಿದ್ದಾರೆ ಗೊತ್ತಿಲ್ಲ ಅವರು ಮೃತರಾಗಿದ್ದಾರೆ. ತಯಾರು ಮಾಡಿರುವವರ ಸಹಿಯನ್ನು ಪಡೆದುಕೊಂಡಿದ್ದೇವೋ ಇಲ್ಲವೋ ಜ್ಞಾಪಕವಿಲ್ಲ. ಶೇಕಡಾ 2 ರೂ ಬಡ್ಡಿಗೆ ಮಾತುಕತೆಯಾಗಿರುತ್ತದೆ, ಸದರಿ ಬಡ್ಡಿಯನ್ನು ನಿಪಿ.1ರಲ್ಲಿ ತೋರಿಸಿರುವುದಿಲ್ಲ. ಸದರಿ ಬಡ್ಡಿ ವ್ಯವಹಾರವನ್ನು ನಿಪಿ-1ರಲ್ಲಿ ಬರೆಸಲು ತೊಂದರೆ ಇರಲಿಲ್ಲ. ಬಡ್ಡಿ ವ್ಯವಹಾರದ ಬಗ್ಗೆ ಯಾವುದೇ ಮಾತುಕತೆ ಆಗಿರುವುದಿಲ್ಲ. ನಿಪಿ.1ರಲ್ಲಿ ಕಂಡು ಬರುವ ಹೆಬ್ಬೆಟ್ಟಿನ ಗುರುತಿನ ಕೆಳಗೆ ಮಟೇಶಪ್ಪ ಎಂದು ಬರೆದರು ನನಗೆ ನೆನಪಿಲ್ಲ. ನಿಪಿ-1ರ ಪತ್ರ ಬರಹಗಾರ ಮೃತರಾಗಿರುವ ಕಾರಣ ಸಾಕ್ಷಿ ಮಾಡಿಸಲು ಸಾಧ್ಯವಿಲ್ಲ ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1ಕ್ಕೆ ಪ್ರತಿವಾದಿ ಹೆಬ್ಬೆಟ್ಟು ಹಾಕಿಲ್ಲ ಮತ್ತು ಆತನ ಗುರುತು ಅಲ್ಲ ಎಂದರೆ ಸರಿಯಲ್ಲ.

ಮಟೇಶಪ್ಪನಿಗೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಆಸ್ತಿ ಇರುತ್ತದೆ ಸರ್ವೇ ನಂಬರ್ ಗೊತ್ತಿಲ್ಲ. ನನಗೆ ಪ್ರತಿವಾದಿಗೆ 50 ಸಾವಿರ ಕೊಡುವಷ್ಟು ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ಆತನಿಗೆ 50 ಸಾವಿರ ಪಡೆದುಕೂಳ್ಳುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ ಮತ್ತು ಪ್ರತಿವಾದಿಗೆ 50 ಸಾವಿರವನ್ನುಕೊಡುವ ಸಾಮರ್ಥ್ಯ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗೂ ನನಗೂ ವೈಮನಸ್ಸು ಇದ್ದು ನಿಪಿ-1 ನ್ನು ಸೃಷ್ಟಿ ಮಡಿಕೊಂಡು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಚಂದ್ರಶೇಖರ್ ಅಲಬೂರು)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ